OCTOBER 16, 2026

**AKASHAVANI - DHARWAD**

**PRADESH SAMACHARA (KANNADA) 12.00 P.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

**ರಾಜ್ಯದ ನೂತನ ರಾಜ್ಯಪಾಲರಾಗಿ,** ಹರಿಯಾಣ ಮೂಲದ ಡಾಕ್ಟರ ಸುಧಾ ಯಾದವ್ ಇಂದು, ಲೋಕಭವನದಲ್ಲಿ ಆಯೋಜಿತ ಸರಳ ಸಮಾರಂಭದಲ್ಲಿ ಪ್ರಮಾಣ ವಚನ ಸ್ವೀಕರಿಸಿದರು. ನೂತನ ರಾಜ್ಯಪಾಲರಿಗೆ, ರಾಜ್ಯ ಉಚ್ಚ ನ್ಯಾಯಾಲಯದ, ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು, ಪ್ರಮಾಣ ವಚನ ಬೋಧಿಸಿದರು. ನಿಕಟಪೂರ್ವ ರಾಜ್ಯಪಾಲರಾದ ಥಾವರ ಚಂದ್ ಗೆಹ್ಲೋಟ್, ಮುಖ್ಯಮಂತ್ರಿ ಡಿ.ಕೆ ಶಿವಕುಮಾರ,  ಸೇರಿದಂತೆ ಗಣ್ಯರು ಪಾಲ್ಗೊಂಡಿದ್ದರು.

<><><>

**ರಾಜ್ಯದ ಹಿತಾಸಕ್ತಿ, ಜನರ ಕಲ್ಯಾಣ** ಹಾಗೂ ಸರ್ವತೋಮುಖ ಅಭಿವೃದ್ಧಿಗಾಗಿ ಸರ್ಕಾರವು, ರಾಜ್ಯಪಾಲರೊಂದಿಗೆ ಸದಾ ಕೈ ಜೋಡಿಸಿ ಮುನ್ನಡೆಯಲಿದೆ ಎಂದಿರುವ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ, ಸಾಮಾಜಿಕ ಜಾಲತಾಣ ಎಕ್ಸ್ ಖಾತೆ ಮೂಲಕ ಯಶಸ್ವಿ ಕಾರ್ಯಾವಧಿಯ ಶುಭ ಹಾರೈಸಿದ್ದಾರೆ.

<><><>

**ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ** – ಸಿ.ಎಸ್.ಆರ್. ಸಂಪನ್ಮೂಲಗಳನ್ನು, ರಾಜ್ಯದೊಳಗೆ ಬಳಸಿಕೊಳ್ಳುವ ಸದಾಶಯ, ಸರ್ಕಾರದ್ದು ಎಂದು, ಮಾಹಿತಿ ಹಾಗೂ ಜೈವಿಕ ತಂತ್ರಜ್ಞಾನ ಖಾತೆ ಸಚಿವ, ಪ್ರಿಯಾಂಕ ಖರ್ಗೆ, ಹೇಳಿದ್ದಾರೆ.  ಬೆಂಗಳೂರಿನಲ್ಲಿ ಜಾಗತಿಕ ಸಾಮರ್ಥ್ಯ ಕೇಂದ್ರಗಳ, ಸಾಮಾಜಿಕ ಹೊಣೆಗಾರಿಕೆ ನಾಯಕತ್ವ ವೇದಿಕೆ – 'ಸೊಲ್ಯಾಸ್' ನಲ್ಲಿ ಭಾಗವಹಿಸಿ, ಮಾತನಾಡಿದರು. ಪ್ರಸ್ತಾವಿತ ಸಿ.ಎಸ್.ಆರ್. ನೂತನ ರಾಜ್ಯ ನೀತಿಯಡಿ ಶಿಕ್ಷಣ, ಕೌಶಲ್ಯಾಭಿವೃದ್ಧಿ, ಜೀವನೋಪಾಯ, ಜಲ ನಿರ್ವಹಣೆ, ಸುಸ್ಥಿರತೆ, ಪೌಷ್ಟಿಕತೆ ಹಾಗೂ ಸಮುದಾಯದ ಅಭಿವೃದ್ಧಿಗೆ ಆದ್ಯತೆ ನೀಡಲಾಗುತ್ತಿದೆ ಎಂದರು.

<><><>

**ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು,** ಸಾರ್ವಜನಿಕ ಸೇವೆಯಲ್ಲಿ, ಸಾರ್ಥಕ 25 ವರ್ಷಗಳನ್ನು ಪೂರ್ಣಗೊಳಿಸಿದ್ದಾರೆ. ತನ್ನಿಮಿತ್ತ, 'ಜನ ಸೇವೆಯಿಂದ ದೇಶ ಸೇವೆ' ಎಂಬ, ಧ್ಯೇಯದೊಂದಿಗೆ ಕೈಗೊಳ್ಳಲಾದ ಮಾಸಿಕ ಅಭಿಯಾನ, ನಾಳೆಗೆ ಸಂಪನ್ನಗೊಳ್ಳಲಿದೆ. ಆಕಾಶವಾಣಿಯ ವಿಶೇಷ ಸರಣಿಯಲ್ಲಿ,

ಇಂದು, 'ವಂದೇ ಭಾರತ ರೈಲು ಯೋಜನೆ' ಕುರಿತು, ಒಂದು ನೋಟ..ಆಮದು ತಂತ್ರಜ್ಞಾನದಿಂದ, ಸ್ವದೇಶಿ ಆವಿಷ್ಕಾರದತ್ತ, ವಂದೇ ಭಾರತ ರೈಲು ಯೋಜನೆ, ಮಹತ್ವದ ಮೈಲಿಗಲ್ಲಾಗಿ ಹೊರಹೊಮ್ಮಿದೆ. 'ವಂದೇ ಭಾರತ' ಅನ್ನು ದೇಶದ ಮೊದಲ ಸ್ಥಳೀಯ ಅರೆ–ಹೈ–ಸ್ಪೀಡ್ ರೈಲಾಗಿ ಅಭಿವೃದ್ಧಿಪಡಿಸಲಾಗಿದೆ. ಇದರಿಂದ ಪ್ರಮುಖ ನಗರಗಳ ನಡುವಿನ ಪ್ರಯಾಣದ ಸಮಯ ತೀವ್ರವಾಗಿ ಕಡಿಮೆಯಾಗಿದೆ. ಸೌಕರ್ಯ, ಸುರಕ್ಷತೆ ಮತ್ತು ಆನ್‌ಬೋರ್ಡ್ ಸೌಲಭ್ಯಗಳು ವಿಶ್ವ ದರ್ಜೆಯ ಮಾನದಂಡಗಳನ್ನು ತಲುಪಿವೆ. ವಂದೇ ಭಾರತ ರೈಲು ಸೇವೆ ದೇಶದ ವಿವಿಧೆಡೆಗಳಲ್ಲಿ ವಿಸ್ತರಿಸಲ್ಪಡುತ್ತಿದೆ.

<><><>

**ಬೆಂಗಳೂರು–ಮುಂಬೈ ಮಧ್ಯೆ, ವಂದೇ ಭಾರತ** ಸ್ಲೀಪರ್ ರೈಲಿಗೆ ಎರಡು ಮಾರ್ಗಗಳ ಪ್ರಸ್ತಾವನೆಗೆ ಒತ್ತಾಯಿಸಿ, ಹುಬ್ಬಳ್ಳಿ ನೈಋತ್ಯ ರೇಲ್ವೆ, ಪ್ರಾದೇಶಿಕ ರೇಲ್ವೆ ಬಳಕೆದಾರರ ಸಲಹಾ ಸಮಿತಿ ವತಿಯಿಂದ, ರೇಲ್ವೆ ಮಹಾ ಪ್ರಬಂಧಕರಿಗೆ ಮನವಿ ಸಲ್ಲಿಸಲಾಯಿತು.

<><><>

**ನೈಋತ್ಯ ರೇಲ್ವೆ, ಬೆಂಗಳೂರು** ವಿಭಾಗವು 1 ತಾರೀಖಿನಿಂದ, ನಿನ್ನೆಯವರೆಗೆ ಆಯೋಜಿಸಿದ, 'ಸ್ವಚ್ಛತಾ ಪಾಕ್ಷಿಕ –2026', ಸ್ವಚ್ಛತೆ ಜಾಗೃತಿಯೊಂದಿಗೆ ಸಾರ್ವಜನಿಕ ಸಹಭಾಗಿತ್ವದಲ್ಲಿ ಜರುಗಿತು. ಬೆಂಗಳೂರು ಕಂಟೋನಮೆಂಟ್, ಯಶವಂತಪುರ ಸರ್.ಎಂ.ವಿಶ್ವೇಶ್ವರಾಯ ಟರ್ಮಿನಲ್, ಕೃಷ್ಣರಾಜಪುರಂ, ಕೆಂಗೇರಿ ರೇಲ್ವೆ ನಿಲ್ದಾಣಗಳಲ್ಲಿ ಸ್ವಚ್ಛತಾ ಕಾರ್ಯ ಜರುಗಿತು. ಅಧಿಕಾರಿಗಳು, ಸಿಬ್ಬಂದಿ, ಪ್ರಯಾಣಿಕರು ಸೇರಿದಂತೆ ವಿದ್ಯಾರ್ಥಿಗಳು ಸ್ವಚ್ಛತೆ ಹಾಗೂ ಘನತ್ಯಾಜ್ಯ ನಿರ್ವಹಣೆಯ ಪ್ರತಿಜ್ಞೆ ಸ್ವೀಕರಿಸಿದರು.

<><><>

**ಕೇಂದ್ರ ಸರ್ಕಾರದ, ಅಖಿಲ ಭಾರತ ತಾಂತ್ರಿಕ ಶಿಕ್ಷಣ** ಮಂಡಳಿ, ವಿದ್ಯಾರ್ಥಿಗಳಲ್ಲಿ, ಸೃಜನಶೀಲತೆ, ಕೌಶಲ್ಯ ಹಾಗೂ ನಾವೀನ್ಯತಾ ಮನೋಭಾವ ಬೆಳೆಸುವ ಉದ್ದೇಶದಿಂದ, ಸೇವಾ ಫೆಸ್ಟ್ ಇನೋವೇಶನ್ ಚಾಲೆಂಜ್ –2026 ಸ್ಪರ್ಧೆ ಆಯೋಜಿಸಿದೆ. ಈ ಹಿನ್ನೆಲೆ, ಧಾರವಾಡ ಜಿಲ್ಲೆ ವಿದ್ಯಾರ್ಥಿಗಳಿಗಾಗಿ, ಇಂದು, ಹುಬ್ಬಳ್ಳಿಯ ಕೆ.ಎಲ್.ಇ ತಾಂತ್ರಿಕ ವಿಶ್ವವಿದ್ಯಾಲಯದ ಬಯೋಟೆಕ್ ಸಭಾಂಗಣದಲ್ಲಿ ಮಾರ್ಗದರ್ಶನ ಕಾರ್ಯಕ್ರಮ ಜರುಗಲಿದೆ ಎಂದು, ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನದ, ಜಿಲ್ಲಾ ಸಹಾಯಕ ಯೋಜನಾ ಸಮನ್ವಯ ಅಧಿಕಾರಿ ಡಾಕ್ಟರ ರೇಣುಕಾ ಅಮಲಝರಿ ತಿಳಿಸಿದ್ದಾರೆ.

<><><>

**ಡಾಕ್ಟರ ರೇಣುಕಾ ಅಮಲಝರಿ ಧ್ವನಿ– 43 ಸೆಕೆಂದುಗಳು**

<><><>

**ಮೈಸೂರು ಜಿಲ್ಲೆ, ಪಿರಿಯಾಪಟ್ಟಣ** ತಾಲೂಕಿನ, ಕಿರನಹಳ್ಳಿ ಗೇಟ್ ಬಳಿ ಇಂದು ಮುಂಜಾನೆ ಸಂಭವಿಸಿದ ಅಪಘಾತದಲ್ಲಿ, ನಾಲ್ವರು ಸಾವನ್ನಪ್ಪಿದ್ದಾರೆ ಹಾಗೂ ಇಪ್ಪತ್ತಕ್ಕೂ ಹೆಚ್ಚು ಜನ ಪ್ರಯಾಣಿಕರು ಗಾಯಗೊಂಡಿದ್ದಾರೆ. ಮೈಸೂರಿನಿಂದ, ಕೇರಳದತ್ತ ತೆರಳುತ್ತಿದ್ದ ಖಾಸಗಿ ಸ್ಲೀಪರ್ ಕೋಚ್ ಬಸ್ ಹಾಗೂ ಪಿರಿಯಾಪಟ್ಟಣದಿಂದ ಮೈಸೂರು ಮಾರ್ಗವಾಗಿ ಸಾಗುತ್ತಿದ್ದ ಲಾರಿ ನಡುವೆ ಅಪಘಾತ ಸಂಭವಿಸಿದೆ.

ಮೈಸೂರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ಮಲ್ಲಿಕಾರ್ಜುನ ಬಾಲದಂಡಿ ಘಟನಾ ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲನೆ ನಡೆಸಿದರು.

<><><>

ಇಂದು, ರಾಷ್ಟ್ರೀಯ ರಕ್ಷಣಾ ಪಡೆ ಸಂಸ್ಥಾಪನ ದಿನ. ನಿಖರ ಕಾರ್ಯಾಚರಣೆ ಹಾಗೂ ಅಚಲ ಬದ್ಧತೆಯೊಂದಿಗೆ, ರಾಷ್ಟ್ರೀಯ ರಕ್ಷಣಾ ಪಡೆ, ‘ಸರ್ವತ್ರ ಸರ್ವೋತ್ತಮ ಸುರಕ್ಷಾ’ ಎಂಬ ಧ್ಯೇಯದೊಂದಿಗೆ, ಭಯೋತ್ಪಾದನೆ ನಿಗ್ರಹ ಕಾರ್ಯವನ್ನು ಕೈಗೊಳ್ಳುತ್ತದೆ.

<><><>

ಮೈಸೂರು ದಸರಾ ಅಂಗವಾಗಿ ಆಯೋಜಿತ, ಪಂಜ ಕುಸ್ತಿ ಸ್ಪರ್ಧೆಯಲ್ಲಿ, ಮೈಸೂರಿನ ಶಿವಾಜಿ ರಾವ್ ‘ಮೈಸೂರು ದಸರಾ ಕುಮಾರ’ ಹಾಗೂ ಬೆಂಗಳೂರಿನ ಕೆ.ಆರ್ ಮಧುರಾ ‘ಮೈಸೂರು ದಸರಾ ಕುಮಾರಿ’ –2026 ಪ್ರಶಸ್ತಿಗೆ ಭಾಜನರಾದರು.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ

<><><>